# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಲ ಸಂಪನ್ಮೂಲ ಇಲಾಖೆಯ ನೀರಾವರಿ ಯೋಜನೆಗಳ ತಾಂತ್ರಿಕ ಸಲಹಾ ಸಮಿತಿ ಹಾಗೂ ಕೃಷ್ಣಾ – ಮಹದಾಯಿ ಜಲ ವಿವಾದ ತಾಂತ್ರಿಕ ಸಮಿತಿಗಳಿಗೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ನೀಇ 24 ಕೃವಿಇ 99, ದಿನಾಂಕ:03.12.99.
2) ಸರ್ಕಾರದ ಆದೇಶ ಸಂಖ್ಯೆ: ನೀಇ 24 ಕೃವಿಇ 99, ದಿನಾಂಕ:16.12.99.
3) ಸರ್ಕಾರದ ಆದೇಶ ಸಂಖ್ಯೆ: ನೀಇ 34 ಕೃವಿಇ 2000, ದಿನಾಂಕ:25.10.2000
4) ಸರ್ಕಾರದ ಆದೇಶ ಸಂಖ್ಯೆ: ನೀಇ 26 ಕೃವಿಇ 2002, ದಿನಾಂಕ:26.11.2002
5) ಸರ್ಕಾರದ ಆದೇಶ ಸಂಖ್ಯೆ: ನೀಇ 7 ಕೃವಿಇ 2003, ದಿನಾಂಕ:29.11.2004
6) ಸರ್ಕಾರದ ಆದೇಶ ಸಂಖ್ಯೆ: ನೀಇ 7 ಕೃವಿಇ 2003, ದಿನಾಂಕ:22.12.2004
7) ಸರ್ಕಾರದ ಆದೇಶ ಸಂಖ್ಯೆ: ಜಸಂಇ 20 ಕೃವಿಇ 2005, ದಿನಾಂಕ:10.06.2005
8) ಸರ್ಕಾರದ ಆದೇಶ ಸಂಖ್ಯೆ: ಜಸಂಇ 41 ಎನ್‌ಪಿಸಿ 2013, ದಿನಾಂಕ:05.09.2013
9) ಸರ್ಕಾರದ ಆದೇಶ ಸಂಖ್ಯೆ: ಜಸಂಇ 41 ಎನ್‌ಪಿಸಿ 2013 (ಭಾಗ-1), ದಿನಾಂಕ:26.06.2015
10) ಸರ್ಕಾರದ ಆದೇಶ ಸಂಖ್ಯೆ: ಜಸಂಇ 2 ಕೃವಿಇ 2015, ದಿನಾಂಕ:01.12.2015
11) ಮುಖ್ಯ ಇಂಜಿನಿಯರ್ (ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಪತ್ರ ಸಂಖ್ಯೆ:ಜಸಅ/622/ಕೆ.ಜಿ.ಎಫ್./2019-20/514 ದಿನಾಂಕ:20.12.2019

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (7)ರ ಸರ್ಕಾರಿ ಆದೇಶದಲ್ಲಿ ಸ್ಕೀಂ-ಎ ಮತ್ತು ಸ್ಕೀಂ-ಬಿ ಯೋಜನೆಗಳ ಮಾಸ್ಟರ್ ಪ್ಲಾನ್ ಸೇರಿದಂತೆ, ಕೃಷ್ಣಾ ಜಲ ವಿವಾದ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಸರ್ಕಾರಕ್ಕೆ ಕಾಲಕಾಲಕ್ಕೆ ಸಲಹೆಗಳನ್ನು ನೀಡಲು ಶ್ರೀ ಡಿ.ಎನ್. ದೇಸಾಯಿ, ನಿವೃತ್ತ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರನ್ನು ಪ್ರಧಾನ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿತ್ತು. ಮುಂದುವರೆದು, ಇದೇ ಆದೇಶದಲ್ಲಿ ಶ್ರೀಯುತರ ಅಧ್ಯಕ್ಷತೆಯಲ್ಲಿ ಅಧಿಕಾರೇತರ ಸದಸ್ಯರುಗಳು ಹಾಗೂ ಅಧಿಕಾರಿ ಸದಸ್ಯರುಗಳನ್ನೊಳಗೊಂಡಂತೆ ಕೃಷ್ಣಾ ಜಲ ವಿವಾದ ತಾಂತ್ರಿಕ ಸಮಿತಿಯನ್ನು ಪುನರ್ ರಚಿಸಲಾಗಿತ್ತು.

2. ಮೇಲೆ ಓದಲಾದ ಕ್ರಮಸಂಖ್ಯೆ (10)ರ ಸರ್ಕಾರದ ಆದೇಶದಲ್ಲಿ ಸ್ಕೀಂ-ಎ ಮತ್ತು ಸ್ಕೀಂ-ಬಿ ಯೋಜನೆಗಳ ಮಾಸ್ಟರ್ ಪ್ಲಾನ್ ಸೇರಿದಂತೆ, ಕೃಷ್ಣಾ ಜಲ ವಿವಾದಕ್ಕೆ ಸಂಬಂಧಿಸಿದಂತೆ ಹಾಗೂ ಮಹಾದಾಯಿ ಜಲ ವಿವಾದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಪರಿಶೀಲಿಸಲು ಹಾಗೂ ಸರ್ಕಾರಕ್ಕೆ ಕಾಲಕಾಲಕ್ಕೆ ಸಲಹೆ/ಶಿಫಾರಸ್ಸನ್ನು ನೀಡಲು "ಕೃಷ್ಣಾ ಜಲ ವಿವಾದ ತಾಂತ್ರಿಕ ಸಮಿತಿ"ಯನ್ನು "ಕೃಷ್ಣಾ-ಮಹದಾಯಿ ಜಲ ವಿವಾದಗಳ ತಾಂತ್ರಿಕ ಸಮಿತಿ"ಯೆಂದು ಮರು ನಾಮಾಂಕಿತಗೊಳಿಸಿ, ಶ್ರೀ ಡಿ.ಎನ್. ದೇಸಾಯಿ, ಕಾರ್ಯದರ್ಶಿಗಳು (ನಿವೃತ್ತ), ಲೋಕೋಪಯೋಗಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಪುನರ್ ರಚಿಸಿ, ಶ್ರೀಯುತರನ್ನು ಕೃಷ್ಣಾ ಜಲ ವಿವಾದದ ಪ್ರಧಾನ ಸಲಹೆಗಾರರಾಗಿ ಮುಂದುವರೆಸಲಾಗಿರುತ್ತದೆ.

3. ಮೇಲೆ ಓದಲಾದ ಕ್ರಮಸಂಖ್ಯೆ (9)ರ ಸರ್ಕಾರದ ಆದೇಶದಲ್ಲಿ ಜಲ ಸಂಪನ್ಮೂಲ ಇಲಾಖೆಯ ನೀರಾವರಿ ಯೋಜನೆಗಳ ತಾಂತ್ರಿಕ ಸಲಹಾ ಸಮಿತಿಯನ್ನು ಶ್ರೀ ಡಿ.ಎನ್.ದೇಸಾಯಿ, ಕಾರ್ಯದರ್ಶಿಗಳು (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಿ, ಸದರಿ ಸಮಿತಿಯ ಕಾರ್ಯಭಾರಗಳ ಕುರಿತು ಆದೇಶಿಸಲಾಗಿದೆ.

4. ಮೇಲೆ ಓದಲಾದ ಕ್ರಮಸಂಖ್ಯೆ (11)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ) ಇವರು ಕೃಷ್ಣಾ-ಮಹದಾಯಿ ಜಲ ವಿವಾದ ತಾಂತ್ರಿಕ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಡಿ.ಎನ್.ದೇಸಾಯಿ ಇವರು ನಿಧನರಾಗಿರುವುದರಿಂದ ತಾಂತ್ರಿಕ ಸಮಿತಿಗೆ ಅಧ್ಯಕ್ಷರನ್ನು ನೇಮಿಸಬೇಕಾಗಿರುತ್ತದೆಯೆಂದು ಹಾಗೂ ಸದರಿ ಸಮಿತಿಗೆ ವಿಷಯಗಳ ಪರಿಣಿತಿ ಹೊಂದಿರುವವರನ್ನು ಗುರುತಿಸಿ, ತಾಂತ್ರಿಕ ಸಮಿತಿಯನ್ನು ಪುನರ್ ರಚಿಸುವ ಅಗತ್ಯವಿದೆಯೆಂದು ವರದಿ ಮಾಡಿರುತ್ತಾರೆ.

27.1.2020

5. ಶ್ರೀ ಡಿ.ಎನ್.ದೇಸಾಯಿ, ಕಾರ್ಯದರ್ಶಿಗಳು (ನಿವೃತ್ತ) ಇವರ ನಿಧನದ ಹಿನ್ನೆಲೆಯಲ್ಲಿ, ಜಲ ಸಂಪನ್ಮೂಲ ಇಲಾಖೆಯ ನೀರಾವರಿ ಯೋಜನೆಗಳ ತಾಂತ್ರಿಕ ಸಲಹಾ ಸಮಿತಿ ಹಾಗೂ ಕೃಷ್ಣಾ – ಮಹದಾಯಿ ಜಲ ವಿವಾದ ತಾಂತ್ರಿಕ ಸಮಿತಿಗಳಿಗೆ ಅಧ್ಯಕ್ಷರನ್ನು ನೇಮಿಸುವ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂ: ಜಸಂಇ 21 ಕೃವಿಇ 2019 (ಇ),**
**ಬೆಂಗಳೂರು, ದಿನಾಂಕ:27.01.2020.**

ಕೃಷ್ಣಾ – ಮಹದಾಯಿ ಜಲ ವಿವಾದ ತಾಂತ್ರಿಕ ಸಮಿತಿಯ ಅಧ್ಯಕ್ಷರನ್ನಾಗಿ ಹಾಗೂ ಪ್ರಧಾನ ಸಲಹೆಗಾರರನ್ನಾಗಿ ಮತ್ತು ಜಲ ಸಂಪನ್ಮೂಲ ಇಲಾಖೆಯ ನೀರಾವರಿ ಯೋಜನೆಗಳ ತಾಂತ್ರಿಕ ಸಮಿತಿಗೆ ಅಧ್ಯಕ್ಷರನ್ನಾಗಿ ತಾತ್ಕಾಲಿಕವಾಗಿ ಶ್ರೀ ಅನಿಲಕುಮಾರ್, ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

27.1.2020
(ಎಂ.ಎಸ್.ಮೋಹನ್)
ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ-3),
ಜಲಸಂಪನ್ಮೂಲ ಇಲಾಖೆ.

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ)/(ಇ & ಆರ್.ಎಸ್.ಎ)/(ಎ & ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
8) ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
9) ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು.
10) ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
11) ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
12) ಕೃಷ್ಣಾ – ಮಹದಾಯಿ ಜಲ ವಿವಾದ ತಾಂತ್ರಿಕ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ (ಮುಖ್ಯ ಇಂಜಿನಿಯರ್ (ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಮುಖಾಂತರ).
13) ನೀರಾವರಿ ಯೋಜನೆಗಳ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ (ಮುಖ್ಯ ಇಂಜಿನಿಯರ್ , ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಮುಖಾಂತರ).
14) ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಲೋಕೋಪಯೋಗಿ-ಆರ್ಥಿಕ ಕೋಶ).
15) ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
16) ಸರ್ಕಾರದ ಉಪ ಕಾರ್ಯದರ್ಶಿಗಳು (ಕೆ.ಬಿ.ಜೆ.ಎನ್)/(ಸೇವೆಗಳು), ಜಲ ಸಂಪನ್ಮೂಲ ಇಲಾಖೆ.
17) ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ-4)/ ಅಧೀನ ಕಾರ್ಯದರ್ಶಿ(ತಾಂತ್ರಿಕ-1)/(ತಾಂತ್ರಿಕ-2)/(ತಾಂತ್ರಿಕ-5)
18) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.